ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳಿದ್ದಾರೆ. ಕೆಲವು ಪರ್ಯಾಯ ಪದಗಳನ್ನು ಪರಿಶಿಷ್ಟ ಜಾತಿಗೇ ಸೇರಿಸಬೇಕೆಂದು ಬೇಕಾದಷ್ಟು ಅರ್ಜಿಗಳು ನಮ್ಮ ಮುಂದೆ ಇವೆ. ಅದನ್ನೆಲ್ಲಾ ಕೂಡ ಕಮಿಟಿ ಮುಂದೆತರುತ್ತೇವೆ.

ಶ್ರೀ ಹೆಚ್.ಡಿ.ಬಸವರಾಜು: ಮಾನ್ಯ ಅಧ್ಯಕ್ಷರೆ, 1976ರಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ಒಂದು ಗೆಜೆಟ್‌ನ್ನು ಹೊರಡಿಸಿದೆ. ಆ ಗೆಜೆಟ್‌ನಲ್ಲಿ ಇವರು ಏನು ಮಾಡಿದ್ದಾರೆಂದರೆ-ಪರಿಶಿಷ್ಟ ಪಂಗಡಕ್ಕೆ ಸೇರಿದೆ ಎಂದು ಡಿಕ್ಲೇರ್ ಮಾಡಿದ್ದಾರೆ. ಅದನ್ನು ತಮ್ಮ ಮೂಲಕ ಮಾನ್ಯ ಸಮಾಜ ಕಲ್ಯಾಣ ಸಚಿವರಿಗೆ ಕಳುಹಿಸಿಕೊಡುತ್ತೇನೆ. ಪುನಃ ಅದನ್ನು ಪರಿಶೀಲನೆ ಮಾಡಿ ನನಗೆ ಸರಿಯಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಆಲ್ ರೈಟ್, ತಾವು ಅದನ್ನು ಕಳುಹಿಸಿಕೊಡಿ.

ವಿಷಯ: ರೇಷ್ಮೆ ಇಲಾಖೆಗೆ ವಿಶ್ವಬ್ಯಾಂಕ್‌ನ ನೆರವು.

281 (2475)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರೇಷ್ಮೆ ಇಲಾಖೆಗೆ ಇದುವರೆವಿಗೂ ವಿಶ್ವ ಬ್ಯಾಂಕಿನಿಂದ ಅಭಿವೃದ್ಧಿಗಾಗಿ ಪಡೆದಿರುವ ಹಣವೆಷ್ಟು?

ಆ) ಇಲಾಖೆಯ ಅಭಿವೃದ್ಧಿಗಾಗಿ ಈ ಹಣದಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು?

ಇ) ಇದರಿಂದ ಇಲಾಖೆಗೆ ಯಾವ ಯಾವ ವಲಯದಲ್ಲಿ ಎಷ್ಟು ಎಷ್ಟು ಪ್ರಯೋಜನವಾಗಿದೆ.

ಶ್ರೀ ಎಂ.ವರದೇಗೌಡ (ರೇಷ್ಮೆ ರಾಜ್ಯ ಸಚಿವರು):

ಅ) 1. ಮೊದಲನೆ ಹಂತ ರೂ.59.34 ಕೋಟಿಗಳಲ್ಲಿ (ಕೆ.ಎಸ್.ಪಿ. ರೂ.53.95 ಮಿಲಿಯನ್ ಡಾಲರ್‌ಗಳಲ್ಲಿ)

2. 2ನೇ ಹಂತ
ಎನ್ ಎಸ್ಸಿ: ರೂ.65.92 ಕೋಟಿಗಳಲ್ಲಿ
ಒಟ್ಟು ರೂ.125.26 ಕೋಟಿಗಳಲ್ಲಿ
(ರೈತರಿಗೆ ನೀಡಿದ ಸಾಲದ ಬಾಬ್ತು ಹೊರತುಪಡಿಸಿ)

ಈ) 1. ಹಿಪ್ಪನೇರಳೆ ಕ್ಷೇತ್ರವನ್ನು ಹೆಚ್ಚಿಸುವುದು, ಸುಧಾರಣೆ ತಳಿಗಳ ಅಭಿವೃದ್ಧಿ.

2. ರೇಷ್ಮೆ ಉತ್ಪಾದನೆಯನ್ನು ಹೆಚ್ಚಿಸುವುದು.

3. ಪ್ರತಿ ಹೆಕ್ಟೇರಿನ ಗೂಡು ಉತ್ಪಾದಕತೆ ಹೆಚ್ಚಿಸುವುದು

4. ಸರಾಸರಿ ಇಳುವರಿ ಹೆಚ್ಚಿಸುವುದು.

5. ರಂಡಿಟಾವನ್ನು ಇಳಿಸುವುದು: ರೇಷ್ಮೆ ಗುಣಮಟ್ಟ ಸುಧಾರಿಸುವುದು.

6. ಇಲಾಖೆಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

7. ಸಂಶೋಧನೆಯನ್ನು ಬಲಪಡಿಸುವುದು.

8. ಕ್ರೆಡಿಟ್ ಕಾರ್ಯಕ್ರಮದಡಿ ರೈತರಿಗೆ ಸಾಲಸೌಲಭ್ಯ.

ಇ) 1. ಯೋಜನೆಯ ಪೂರ್ವದಲ್ಲಿ 1,10,000 ಹೆಕ್ಟೇರುಗಳಲ್ಲಿದ್ದ ಹಿಪ್ಪನೇರಳೆ ಪ್ರದೇಶವು ಈಗ 1,67,000 ಹೆಕ್ಟೇರ್‌ಗೆ ಹೆಚ್ಚಳಗೊಂಡಿದೆ. ಸುಧಾರಿತ 'ಎನ್' ಶ್ರೇಣಿ ತಳಿಗಳು 900 ಎಕರೆ ಪ್ರದೇಶದಲ್ಲಿದೆ.

2. ಯೋಜನೆಯ ಪೂರ್ವದಲ್ಲಿ 3,127 ಮೆ.ಟನ್ ಗಳಷ್ಟಿದ್ದ ರೇಷ್ಮೆ ಉತ್ಪಾದನೆಯು ಈಗ 3327 ಮೆ.ಟನ್‌ಗಳಷ್ಟಾಗಿದೆ.

3. ಕ್ಷೇತ್ರವಾರು ಗೂಡಿನ ಉತ್ಪಾದನೆ ಹೆಚ್ಚಿರುತ್ತೆ. (117:525 ಕೆ.ಜಿ.ಯಿಂದ 230:750 ಕೆ.ಜಿ. ಹೆಕ್ಟೇರ್ ಒಂದಕ್ಕೆ).

4. 100 ಮೊಟ್ಟೆಗೆ ಸರಾಸರಿ ಇಳುವರಿ ನೀರಾವರಿ ಪ್ರದೇಶದಲ್ಲಿ 20 ಕೆ.ಜಿ.ಯಷ್ಟು ಹಾಗೂ ಮಳೆಯಾಶ್ರಿತ ಪ್ರದೇಶದಲ್ಲಿ 17 ಕೆ.ಜಿ.ಯಷ್ಟು ಯೋಜನೆ ಪೂರ್ವದಲ್ಲಿತ್ತು. ಈಗ ಇದು ಕ್ರಮವಾಗಿ 39 ಕೆ.ಜಿ. ಹಾಗೂ 28 ಕೆ.ಜಿ.ಗೆ ಹೆಚ್ಚಳಗೊಂಡಿದೆ. ಅಂತೆಯೇ ಪ್ರತಿ ಹೆಕ್ಟೇರಿಗೂ ನೀರಾವರಿ ಹಾಗೂ ಮಳೆಯಾಶ್ರಿತ ಪ್ರದೇಶದಲ್ಲಿ ಹೆಚ್ಚಳಗೊಂಡಿದೆ.

5. ಸಂಶೋಧನಾಲಯದಿಂದ ಹೊಸ ತಾಂತ್ರಿಕ ವಿಧಾನಗಳು, ತಳಿಗಳು ಹಾಗೂ ಇತರೆ ಸೌಲಭ್ಯಗಳು ರೇಷ್ಮೆ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಫಲಕಾರಿಯಾಗಿರುತ್ತೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರವಾಗಿ ಇದು 1980ನೇ ಇಸವಿಯಲ್ಲಿ ಪ್ರಾರಂಭಗೊಂಡು ಕಳೆದ 17 ವರ್ಷಗಳಲ್ಲಿ ಸುಮಾರು 135

ಕೋಟಿ ರೂಪಾಯಿಗಳನ್ನು ವಿಶ್ವಬ್ಯಾಂಕಿನಿಂದ ತೆಗೆದುಕೊಂಡಿದ್ದಾರೆ. ವಿಶ್ವಬ್ಯಾಂಕಿನಿಂದ ತೆಗೆದುಕೊಂಡಂಥ ಹಣದಲ್ಲಿ ಯಾವ ರೀತಿಯಾಗಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಿ ಎಂಬುದಕ್ಕೆ ದೊಡ್ಡ ಪಟ್ಟಿಯನ್ನೇ ಕೊಟ್ಟಿದ್ದೀರಿ. ಬಹುಶಃ ಅದಕ್ಕೆಲ್ಲಾ ಸ್ಪಷ್ಟೀಕರಣ ಕೇಳುವುದಕ್ಕೆ ಕಷ್ಟವಾಗುತ್ತದೆ. ಸಮಗ್ರವಾದ ಉತ್ತರವನ್ನು ನಾನು ನಿಮ್ಮಿಂದ ಬಯಸುವುದರ ಜೊತೆಗೆ ಯಾವ ವಿಷಯದಲ್ಲಿ ನಾನು ಸ್ಪಷ್ಟೀಕರಣ ಕೇಳಬೇಕು ಎನ್ನುವುದರ ಬಗ್ಗೆ, ಕಳೆದ 17 ವರ್ಷದಲ್ಲಿ ಹಿಪ್ಪನೇರಳೆ ಕ್ಷೇತ್ರದಲ್ಲಿ ಎಷ್ಟು ತರಹದ ಹೊಸ ತಳಿಗಳನ್ನು ನೀವು ಬಿಡುಗಡೆ ಮಾಡಿದ್ದೀರಿ? ಅದೇ ರೀತಿ ಸಂಶೋಧನೆ ಮಾಡುವುದಕ್ಕೋಸ್ಕರ ತಲಘಟ್ಟಪುರದಲ್ಲಿ ದೊಡ್ಡ ಸಂಶೋಧನಾ ಕೇಂದ್ರವನ್ನೇ ಪ್ರಾರಂಭ ಮಾಡಿದ್ದೀರಿ. ಆ ಕೇಂದ್ರದಲ್ಲಿ ಎಷ್ಟು ಹೊಸ ರೇಷ್ಮೆ ತಳಿಗಳನ್ನು ಬಿಡುಗಡೆ ಮಾಡಿದ್ದೀರಿ? ಅದರಲ್ಲಿ ಎಷ್ಟು ಅಕ್ಸೆಪ್ಟ್ ಆಗಿದೆ ಮತ್ತು ಎಷ್ಟು ರಿಜೆಕ್ಟ್ ಆಗಿದೆ ಎನ್ನುವುದರ ಬಗ್ಗೆ ತಾವು ಹೇಳಬೇಕು. ಸಾಕಷ್ಟು ರೇಷ್ಮೆ ಉತ್ಪಾದನೆಯಾಗಿದೆ ಎಂಬ ಮಾತನ್ನು ಹೇಳುತ್ತೀರಿ. ರೇಷ್ಮೆ ಉತ್ಪಾದನೆಯಾಗಿದ್ದರೆ ಈಗ ಹೊರದೇಶದಿಂದ, ಚೈನಾ ಇರಬಹುದು, ರಷ್ಯಾ ಇರಬಹುದು, ಸೌತ್ ಕೊರಿಯಾ ಇರಬಹುದು ಅಲ್ಲಿಂದ ಕದ್ದುಕೊಂಡು ಈ ದೇಶಕ್ಕೆ ತರತಕ್ಕ ಪರಿಸ್ಥಿತಿ ಇದೆಯೇ? ಕೊನೆಯದಾಗಿ, ತಾವು ಹೇಳಿದಿರಿ 1, 10,000ರಿಂದ 1,67,00 ಎಕರೆಯ ವರೆಗೆ ಜಾಸ್ತಿಯಾಗಿದೆ ಎಂದು ಮತ್ತು 3 ಸಾವಿರದಿಂದ 8 ಸಾವಿರ ಟನ್‌ಗಳಷ್ಟು ಜಾಸ್ತಿಗಿದೆ ಎಂದು. ಇಷ್ಟನ್ನು ಹೇಳಿದರೆ ಆಮೇಲೆ ಸ್ಪಷ್ಟೀಕರಣ ಕೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ.ವರದೇಗೌಡ: ಈಗಾಗಲೇ ಏನು ಹೊಸ ವೆರೈಟಿ ಕಡ್ಡಿ ಏನು ಮಾಡಿದ್ದೀರಿ ಮತ್ತು ಹೊಸ ತಳಿ ಏನು ಮಾಡಿದ್ದೀರೆಂಬುದರ ಬಗ್ಗೆ ಮಾನ್ಯ ಜಯಚಂದ್ರ ಅವರು ಕೇಳಿದ್ದಾರೆ. ವಿಶ್ವ ಬ್ಯಾಂಕ್ ಯೋಜನೆ ಬಂದು 17 ವರ್ಷ ಆದರೆ ಸಂಶೋಧನೆಯಲ್ಲಿ ತೊಡಗಿರುವುದು ನಿಜ, ಅದನ್ನು ಒಪ್ಪುತ್ತೇನೆ. ಇವತ್ತು ಎನ್. ಮತ್ತು ವಿ1 ವಿಶ್ವ ವೆರೈಟಿ ಎಂದು ಎರಡು ತಳಿಗಳನ್ನು ರೈತರಿಗೆ ಕೊಡತಕ್ಕದ್ದು ಮಾಡಿದ್ದೇವೆ. ಸಿ.ಆರ್.ಎಸ್., ಕೆ.ಎನ್.ಒ1 ಮತ್ತು ಬಿ.ಎಲ್. ಎಂಬ ಹೊಸತಳಿಗಳನ್ನು ರೈತರಿಗೆ ಮತ್ತೆ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಇವತ್ತು ವಿಶ್ವ ಬ್ಯಾಂಕ್ ನೆರವಿನಿಂದ ಏನು ಹಣ ತಂದು ಖರ್ಚು ಮಾಡಿದ್ದೇವೆ. ಅದಕ್ಕೆ ಪೂರ್ಣ ಬಡ್ಡಿ ಕೊಟ್ಟಿದ್ದೇವೆ. ಇವತ್ತು ಏನು ವಿಶ್ವ ಬ್ಯಾಂಕಿನಿಂದ ಹಣ ತೆಗೆದುಕೊಂಡಿದ್ದೇವೆ ಅದರಲ್ಲಿ ಹಿಪ್ಪನೇರಳೆ ಕ್ಷೇತ್ರಕ್ಕೆ ರೈತರಿಗೆ 8 ಕೋಟಿ ರೂಪಾಯಿಗಳಷ್ಟು ಸಾಲದ ನೆರವನ್ನು ಕೊಟ್ಟಿದ್ದೇವೆ. ಕಟ್ಟಡಗಳಿಗೆ ಶೇಕಡ 40 ರಷ್ಟು ಖರ್ಚು ಮಾಡಿದ್ದೇವೆ. ಅದೇ ರೀತಿ ಕೆ.ಎಸ್.ಐ.ಸಿ.ಗೂ ಕೂಡ ವಿಶ್ವಬ್ಯಾಂಕ್ ನೆರವಿನಿಂದ ಸಾಲದ ರೂಪದಲ್ಲಿ ಕೊಟ್ಟಿದ್ದೇವೆ. ರೀಲರ್ಸ್ ಮತ್ತು ಚರಕದವರಿಗೆ ವಿಶ್ವ ಬ್ಯಾಂಕಿನಿಂದ ಸಾಲದ ರೂಪದಲ್ಲಿ ಕೊಟ್ಟಿದ್ದೇವೆ.

ಅಧ್ಯಕ್ಷರು: ಉತ್ತರ ತೃಪ್ತಿದಾಯಕವಾಗಿದೆ.

ಶ್ರೀ ಟಿ.ಬಿ.ಜಯಚಂದ್ರ: ತಾವು 135 ಕೋಟಿ ರೂಪಾಯಿಗಳನ್ನು ತಂದು ಇನೆವೆಸ್ಟ್ ಮಾಡಿರತಕ್ಕದ್ದು ಸಂಪೂರ್ಣವಾಗಿ ನಿಷ್ಪಯೋಜನದಾಗಿರತಕ್ಕ ಕಟ್ಟಡದ ಮೇಲೆ ಹಾಕಿದ್ದೀರಿ. ಎರಡನೆಯದಾಗಿ ಅಧಿಕಾರಿಗಳನ್ನು ವಿದೇಶಕ್ಕೆ ಕಳುಹಿಸುತ್ತಿದ್ದೀರಿ. ತಾವು ಸಾಮರಾರು ಜನ ಅಧಿಕಾರಿಗಳನ್ನು ವಿದೇಶಕ್ಕೆ ಕಳುಹಿಸಿ ಅವರು ಅಲ್ಲಿಂದ ಬರುವುದರೊಳಗೆ ಬೇರೆ ಕಡೆ ಪೋಸ್ಟಿಂಗ್ಸ್ ಆಗಿರುತ್ತಾರೆ. ನೀವು ಎಷ್ಟು ದುಡ್ಡು ತಂದರೂ ಪ್ರಯೋಜನವಾಗಿಲ್ಲವೆಂಬುದಕ್ಕೆ ಇದೊಂದು ನಿದರ್ಶನವಾಗಿದೆ. ಬರೀ ಕಾಗದದ ಮೇಲೆ ಇಷ್ಟೊಂದು ಸಾಧನೆ ಇರಬಹುದು; ಆದರೆ ನಿಜ ಸ್ಥಿತಿಯಲ್ಲಿ ಏನೇನೂ ಸಾಧನೆಯಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್: ನಿಷ್ಪಯೋಜನ ಇಲ್ಲವೆಂದು ಅವರು ಹೇಳಿದರು. ಆದರೆ ಪ್ರಯೋಜನ ಇಲ್ಲವೆಂದು ನಾನು ತಂದೆ. ಅದಕ್ಕೆ ಮಾನ್ಯ ನಂಜೇಗೌಡರು ಪ್ರಯೋಜನ ಇದೆ, ಇಸ್ಪೀಟು ಆಡುತ್ತಾರೆ ಅಂದರು.

ಶ್ರೀ ಟಿ.ಬಿ.ಜಯಚಂದ್ರ: ಒಂದೂವರೆ ಕೋಟಿ ರೂಪಾಯಿ ಬೆಚ್ಚದಲ್ಲಿ ಕೋಲ್ಡ್ ಸ್ಟೋರೇಜ್ ಮಾಡಿದ್ದಾರೆ. ಇಪತ್ತಿನವರೆಗೆ ಅದರ ಬೀಗ ಬಿಚ್ಚಿಲ್ಲ. ಅಂಥ ಪರಿಸ್ಥಿತಿಯಲ್ಲಿರುವುದು ತಮಗೆ ಗೊತ್ತಿರತಕ್ಕದ್ದು. ನಾವೆಲ್ಲ ಈ ಉದ್ಯಮದಲ್ಲಿ ಅನುಭವ ಪಡೆದಿರತಕ್ಕವರು. ನೀವು 135 ಕೋಟಿ ರೂಪಾಯಿಗಳನ್ನು ತಂದು ತಿಂದು ನೀರು ಕುಡಿದಿರಿ ಎಂಬ ಮಾತನ್ನು ಹೇಳಬಹುದೆ?

ಅಧ್ಯಕ್ಷರು: ಕಟ್ಟುನಿಟ್ಟಾಗಿ ನಿರ್ದಾಕ್ಷಿಣ್ಯವಾಗಿ ಎಲ್ಲಾ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ.

ಶ್ರೀ ಎಂ.ವರದೇಗೌಡ: ಅವರು ಹೇಳತಕ್ಕದ್ದರಲ್ಲಿ ನಿಜ ಇದೆ. ಏಕೆಂದರೆ ಬೀದರ್‌ನಲ್ಲಿ ತೆಗೆದುಕೊಂಡು ಹೋಗಿ ಮಾಡಲ್ ಗೈನೇಜ್ ಕಟ್ಟಿದ್ದಾರೆ, ಬಳ್ಳಾರಿಯಲ್ಲಿ ತೆಗೆದುಕೊಂಡು ಹೋಗಿ ಮಾಡಲ್ ಗೈನೇಜ್ ಕಟ್ಟಿದ್ದಾರೆ. ಒಂದೊಂದು ಗೈನೇಜ್‌ನಲ್ಲಿ ಒಂದು ತಿಂಗಳಿಗೆ ಕನಿಷ್ಟ ಪಕ್ಷ ಒಂದು ಲಕ್ಷದ ಮೂವತ್ತು ಸಾವಿರದಿಂದ ಐವತ್ತು ಸಾವಿರದವರೆಗೆ ವಿದ್ಯುತ್ ಬಿಲ್ ಬರುತ್ತದೆ. ನಮ್ಮ ಹೊಸ ಕರ್ನಾಟಕದಲ್ಲಿ ರೀಲಿಂಗ್ ಸೆಕ್ಷನ್ ಹೆಚ್ಚಾಗಿ ಇಲ್ಲ. ಅದು ಇಡೀ ರಾಜ್ಯವ್ಯಾಪ್ತಿಯಾಗಿರುವುದು ನಿಜ. ಆದರೆ ಈಗ ನಾವು ರೆವ್ಯೂ ಮೀಟಿಂಗ್ ಮಾಡಿದ್ದೇವೆ. ಒಂದು ಜಿಲ್ಲೆಯಲ್ಲಿ 175 ಜನ ಅಧಿಕಾರಿಗಳು ಇದ್ದಾರೆ. ಆದರೆ ಅಲ್ಲಿ ಕೆಲಸ ಇಲ್ಲ. ಎರಡು ಸಾವಿರ ಎಕರೆ ಕಡ್ಡಿ ಇದೆ. ಅದು ಹಿಂದೆ ಮಾಡಿರತಕ್ಕದ್ದು. 1996ರ ಅಂತ್ಯಕ್ಕೆ ನಮ್ಮ ವಿಶ್ವಬ್ಯಾಂಕ್ ಯೋಜನೆ ಮುಗಿಯಿತು. ಆದುದರಿಂದ ಇದರ ಬಗ್ಗೆ ಹೆಚ್ಚು ಒತ್ತುಕೊಟ್ಟು ಕೆಲಸ ಮಾಡುವುದಕ್ಕೆ ಪ್ರಾಮಾಣಿಕ ;ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಗಿಯಿತು.